**ಮೌಲ್ಯ– ನೀತಿಗಳ ಅನ್ಯೋನ್ಯ ಸಂಬಂಧ :** ಜೀವನದಲ್ಲಿ ನಮಗೆ ಹಣ ಮುಂತಾದ ಹಲವಾರು ಮೌಲ್ಯಗಳು ಬೇಕಾಗುತ್ತವೆ. ಅವುಗಳನ್ನು ನಾಲ್ಕು ವಿಧವಾಗಿ ನಮ್ಮ ಹಿರಿಯರು ವಿಂಗಡಿಸಿದ್ದಾರೆ. ಅವುಗಳನ್ನು 'ಪುರುಷಾರ್ಥಗಳು' ಎಂದು ಹೆಸರಿಸಿದ್ದಾರೆ. ಅವೇ **೧. ಧರ್ಮ ೨. ಅರ್ಥ ೩. ಕಾಮ,** ಮತ್ತು **೪. ಮೋಕ್ಷ.** ಇವುಗಳಲ್ಲಿ ಕೂಡ ಮೂರು ವಿಧವಾದ ವಿಂಗಡಣೆಯನ್ನು ನಾವು ಮಾಡಬಹುದು: **೧. ಲೌಕಿಕ ಮೌಲ್ಯ, ೨. ನೈತಿಕ ಮೌಲ್ಯ** ಮತ್ತು **೩. ಪಾರಮಾರ್ಥಿಕ ಮೌಲ್ಯ.**

ಕ್ಷಣಿಕವಾದ ಸಂತೋಷವನ್ನು ನೀಡುವ **ಧನ** (ಹಣ) ಮತ್ತು **ಕಾಮ** (ಆಸೆ) ಗಳನ್ನು ಲೌಕಿಕ ಮೌಲ್ಯಗಳೆಂದು ಕರೆಯಬಹುದು. ಇವು ಜೀವನದಲ್ಲಿ ಅವಶ್ಯವೆನಿಸಿದರೂ, ಅವು ಶಾಶ್ವತವಾದ ಶಾಂತಿ ಮತ್ತು ಸಾರ್ಥಕತೆಯನ್ನು ನೀಡಲಾರವು. ಅವುಗಳಿಂದ ಮಾತ್ರವೇ ಜೀವನವು ಸಾರ್ಥಕ ಎನ್ನಿಸಿಕೊಳ್ಳಲಾರದು.

ಲೌಕಿಕ ಮೌಲ್ಯಗಳನ್ನು ಗಳಿಸಿಕೊಳ್ಳುವ ರೀತಿವಿಧಾನಗಳನ್ನು ತಿಳಿಸಿಕೊಡುವ ವಿಧಾನವೇ **ನೈತಿಕ ಮೌಲ್ಯ.** ಇದನ್ನೇ ನಮ್ಮ ಸಂಸ್ಕೃತಿಯಲ್ಲಿ 'ಧರ್ಮ' ಎಂದು ಕರೆಯುತ್ತಾರೆ. ಲೌಕಿಕ ಮೌಲ್ಯಗಳನ್ನು ನೈತಿಕತೆಯ ಅನುಷ್ಠಾನದ ಮಾರ್ಗದಲ್ಲಿಯೇ ಪಡೆದುಕೊಳ್ಳಬೇಕು. ಈ ನಿಬಂಧನೆಯನ್ನು 'ಧರ್ಮ' ವಿಧಿಸುತ್ತದೆ. ಧರ್ಮಕ್ಕೆ ಅನುಸಾರವಾಗಿ ಇದ್ದರೇನೇ ಅರ್ಥ ಮತ್ತು ಕಾಮಗಳು ಮೌಲ್ಯಗಳೆಂದು ಅನ್ನಿಸಿಕೊಳ್ಳಬಲ್ಲವು. ಇಲ್ಲದಿದ್ದರೆ, ಅವು ಅಪಮೌಲ್ಯಗಳಾಗುತ್ತವೆ, ಜೀವನವನ್ನು ಹಾಳುಮಾಡುತ್ತವೆ.

ನೈತಿಕ ಮೌಲ್ಯವಾದ 'ಧರ್ಮ' ನಮ್ಮ ಜೀವನದಲ್ಲಿ ಮತ್ತೊಂದು ಮಹತ್ವಪೂರ್ಣ ಭೂಮಿಕೆಯನ್ನು ವಹಿಸುತ್ತದೆ. ಲೌಕಿಕ ಮೌಲ್ಯಗಳಿಗೆ ಸರಿಯಾದ ಮಾರ್ಗದರ್ಶನ ಮಾಡುವುದರ ಜೊತೆಗೆ, ಇದು ಪಾರಮಾರ್ಥಿಕ ಮೌಲ್ಯವಾದ ಮೋಕ್ಷಕ್ಕೆ ರಾಜಮಾರ್ಗವಾಗಿ ಪರಿಣಮಿಸುತ್ತದೆ. ಧರ್ಮದ ಆಚರಣೆ ಒಬ್ಬನನ್ನು ಅಧ್ಯಾತ್ಮದ ಅರಿವಿಗೆ ಅರ್ಹನನ್ನಾಗಿ ಮಾಡುತ್ತದೆ. ಹೀಗೆ ನೈತಿಕತೆ ಅಥವಾ ಧರ್ಮವೆನ್ನುವುದು ಲೌಕಿಕ ಮತ್ತು ಪಾರಮಾರ್ಥಿಕಗಳ ನಡುವಣ ಸೇತುವೆಯಾಗಿ ಪರಿಣಮಿಸುತ್ತದೆ. ಧರ್ಮವಿಲ್ಲದಿದ್ದರೆ, ನೈಜ ಲೌಕಿಕ ಸುಖವನ್ನೂ ಗಳಿಸಲಾರೆವು; ಆಧ್ಯಾತ್ಮಿಕ ಆನಂದವನ್ನೂ ಪಡೆಯಲಾರೆವು. ಹೀಗಾಗಿ ಜೀವನದಲ್ಲಿ ಧರ್ಮದ ಮಹತ್ವ ಅತ್ಯಂತ ಹಿರಿದಾದುದು. ರಾಮಾಯಣದಲ್ಲಿ ಬರುವ ಈ ಸುಂದರ ಶ್ಲೋಕವು ಈ ಅಂಶವನ್ನು ಸಮರ್ಥಿಸುತ್ತದೆ:

**ಧರ್ಮಾದರ್ಥಃ ಪ್ರಭವತೇ । ಧರ್ಮಾತ್ ಪ್ರಭವತೇ ಸುಖಮ್ ॥**
**ಧರ್ಮೇಣ ಲಭತೇ ಸರ್ವಂ । ಧರ್ಮಸಾರಮಿದಂ ಜಗತ್ ॥**

"ಧರ್ಮದಿಂದಲೇ ಹಣವನ್ನು ಸಂಪಾದಿಸಬಹುದು. ಧರ್ಮದಿಂದಲೇ ಸುಖವು ಕೂಡ ಹುಟ್ಟುತ್ತದೆ. ಸರ್ವವೂ ಲಭಿಸುವುದು ಧರ್ಮದಿಂದಲೇ. ಇಡೀ ಜಗತ್ತು ಧರ್ಮದ ಸಾರವೇ ಆಗಿದೆ."

ಮೋಕ್ಷವೆಂದರೆ ಆಧ್ಯಾತ್ಮಿಕ ಮೌಲ್ಯ ಅಥವಾ ಪಾರಮಾರ್ಥಿಕ ಮೌಲ್ಯ. ಯಾವುದು ಶಾಶ್ವತವೋ ಅದು ಪಾರಮಾರ್ಥಿಕ. ಮೋಕ್ಷವೆಂದರೆ ಸರ್ವಥಾ ಎಲ್ಲ ಬಗೆಯ ಬಂಧನಗಳಿಂದಲೂ ಬಿಡುಗಡೆ. ವೇದಾಂತದ ದೃಷ್ಟಿಯಿಂದ ಹೇಳುವುದಾದರೆ, ಅವಿದ್ಯೆಯೇ ಬಂಧನ. ಅದೇ ಎಲ್ಲ ರೀತಿಯ ದುಃಖಗಳಿಗೆ ಕಾರಣ. ಅದರಿಂದ ಬಿಡಿಸಿಕೊಳ್ಳುವುದೇ ಮೋಕ್ಷ.

ಮನುಷ್ಯನ ಜೀವನ ವಿಕಾಸಹೊಂದಬೇಕು. ಒಬ್ಬ ವ್ಯಕ್ತಿ ಕೇವಲ ಲೌಕಿಕ ಮೌಲ್ಯಗಳಿಗೆ ಮಾತ್ರ ತನ್ನ ಜೀವನವನ್ನು ಸೀಮಿತಗೊಳಿಸಿಕೊಳ್ಳಬಾರದು. ಮೊದಲು, ನೈತಿಕತೆ ಅಥವಾ ಧರ್ಮದ ಮೂಲಕ ಮಾತ್ರವೇ ಅರ್ಥ ಮತ್ತು ಕಾಮಗಳನ್ನು ಸಂಪಾದಿಸಿಕೊಳ್ಳಬೇಕು. ಆ ಮೂಲಕ ನೈತಿಕತೆಯು ಪರಿಪಕ್ವವಾಗಿ, ಮೋಕ್ಷವೇ ಅವನ ಆತ್ಯಂತಿಕ ಗುರಿಯಾಗಬೇಕು. ಆಗ ಸಹಜವಾಗಿಯೇ ಅಶಾಶ್ವತವಾದ ಅರ್ಥ ಮತ್ತು ಕಾಮಗಳ ಬಯಕೆ ಕಡಮೆಯಾಗುತ್ತ ಬರುತ್ತದೆ. ಇದೇ ಭಾರತೀಯ ಸಂಸ್ಕೃತಿಯು ನಮ್ಮ ಮುಂದೆ ಇಡುವ ಸಮಗ್ರ ಜೀವನದ ಮಾರ್ಗದರ್ಶಿ ಸೂತ್ರ.

**ಅನೀತಿಯ ಯುಗ :** ಇತ್ತೀಚಿನ ನಮ್ಮ ದೇಶದ ವರ್ತಮಾನಗಳನ್ನು ನೋಡಿದರೆ, ಇಂದಿನ ಯುಗವನ್ನು 'ಅನೀತಿಯ ಯುಗ' ಎಂದು ಕರೆಯುವುದು ಸೂಕ್ತ ಎಂದೆನಿಸುತ್ತದೆ. ಜನರು ಭ್ರಷ್ಟರಾಗಿದ್ದಾರೆ; ಹಾಗೆಂದೇ ಜನಪ್ರತಿನಿಧಿಗಳೂ ಮಹಾಭ್ರಷ್ಟರಾಗುತ್ತಿದ್ದಾರೆ. ವ್ಯಕ್ತಿ ಮಟ್ಟದಲ್ಲಿ ನೈತಿಕತೆ ಅನುಷ್ಠಾನಗೊಳ್ಳದೆ, ಸಮಷ್ಟಿ ಅಥವಾ ಸಮಾಜ ಮಟ್ಟದಲ್ಲಿ ಭ್ರಷ್ಟಾಚಾರ ತೊಲಗುವುದು ಸಾಧ್ಯವೇ ಇಲ್ಲ. ಈ ದೃಷ್ಟಿಯಲ್ಲಿ ಡಿ.ವಿ.ಜಿ ಅವರ ಈ ಉಕ್ತಿ ಬಹಳ ಮಹತ್ವವನ್ನು ಪಡೆದುಕೊಳ್ಳುತ್ತದೆ:

**ವ್ಯಷ್ಟಿಮೌಲ್ಯವ ಮರೆಯದಿರ್ಪ ರಾಷ್ಟ್ರಸಮಷ್ಟಿ ।**
**ರಾಷ್ಟ್ರಋಣವನು ಮರೆಯದಾ ಪ್ರಜಾ ವ್ಯಷ್ಟಿ ॥**
**ನಷ್ಟಬರೆ ಶಿಷ್ಟಿ ಲಾಭವದೆಂಬ ಸಮದೃಷ್ಟಿ ।**
**ತುಷ್ಟಿಕರವೊ ಜಗಕೆ – ಮರುಳ ಮುನಿಯ ॥**

ಡಿ.ವಿ.ಜಿಯವರು ಹೇಳುವಂತೆ ರಾಷ್ಟ್ರವು ತನ್ನ ಪ್ರಜೆಗಳ ವ್ಯಕ್ತಿಗತ ಮೌಲ್ಯಗಳನ್ನು ಕಡೆಗಣಿಸುವಂತಿಲ್ಲ. ಹಾಗೆಯೇ ವ್ಯಕ್ತಿಯೊಬ್ಬನು ರಾಷ್ಟ್ರಕ್ಕೆ ತಾನು ಸಲ್ಲಿಸಬೇಕಾದ ಋಣವನ್ನೂ ಮರೆಯಬಾರದು. ಒಂದರ ಹಿತಾಸಕ್ತಿಗೆ ಇನ್ನೊಂದು ಪೂರಕವಾಗಿ ಇರುವುದೇ ಸಮದೃಷ್ಟಿ. ಅದೇ ಜಗತ್ತಿಗೆ ಸಂತೋಷವನ್ನು ತಂದು ಕೊಡುವಂಥದ್ದು. ಇದು ಡಿ.ವಿ.ಜಿ.ಯವರ ಅಭಿಪ್ರಾಯ.

ಈ ನಿಟ್ಟಿನಲ್ಲಿ ವ್ಯಕ್ತಿಗತವಾಗಿ ನಾವೆಷ್ಟು ನೀತಿವಂತರಾಗಿದ್ದೇವೆ ಎಂದು ವಿಶ್ಲೇಷಣೆ ಮಾಡಿಕೊಳ್ಳುವುದು ಅತ್ಯಂತ ಅವಶ್ಯವಾದುದು. ನೈತಿಕ ಸಮಾಜದ ನಿರ್ಮಾಣದಲ್ಲಿ ನಮ್ಮ ಪಾತ್ರವೇನು ಎನ್ನುವ ಆತ್ಮಾವಲೋಕನ ಮಾಡಿಕೊಳ್ಳದೆ ಇದ್ದರೆ, ಸಮಾಜ ಅಥವಾ ದೇಶದ ಮಟ್ಟದಲ್ಲಿ ಯಾವ ಸುಧಾರಣೆಯೂ ಅಸಾಧ್ಯ. ಈ ದೃಷ್ಟಿಯಲ್ಲಿ 'ನಾವು – ನೀವು' ಏನು ತಾನೇ ಮಾಡಲು ಸಾಧ್ಯ? ಗಂಭೀರವಾಗಿ ಯೋಚಿಸೋಣ. ನೀತಿವಂತರನ್ನು ದೇವತೆಗಳ ಸಮಾನ ಎಂದು ಕೃಷ್ಣನು ಹೇಳುತ್ತಾನೆ; ಅನೀತಿವಂತರನ್ನು ಅಸುರರ ಸಮಾನ ಎಂದು ಹೇಳುತ್ತಾನೆ. ನಾವು ಅಸುರರಾಗಬೇಕೋ, ಇಲ್ಲ ದೇವತೆಗಳಾಗಬೇಕೋ – ನಾವೇ ನಿರ್ಧರಿಸಿಕೊಳ್ಳಬೇಕು.